ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1449
ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	17-03-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಇತರೆ ಹಿಂದುಳಿದ ವರ್ಗಗಳ (ಓಬಿಸಿ) ಅಭ್ಯರ್ಥಿಗಳಿಗೆ ಉಚಿತ ತರಬೇತಿ ನೀಡುವ ಸಂಸ್ಥೆಗಳ ಆಯ್ಕೆಗೆ ನಿಗಧಿಪಡಿಸಿದ ಮಾನದಂಡಗಳೇನು;	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕಾರ್ಯನೀತಿ ರಚಿಸಲಾಗಿದ್ದು, ಅದರಂತೆ ದೇಶದ ಅತ್ಯುನ್ನತ ತರಬೇತಿ ಸಂಸ್ಥೆಗಳಿಂದ ಉತ್ತಮ ಗುಣಮಟ್ಟದ ತರಬೇತಿ ಪಡೆಯುವ ಉದ್ದೇಶದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ ಅನುಸಾರ ಇ-ಟೆಂಡರ್ ಕರೆದು ಅರ್ಹ ತರಬೇತಿ ಸಂಸ್ಥೆಗಳನ್ನು ಆಯ್ಕೆ ಮಾಡಲಾಗುತ್ತದೆ. ತರಬೇತಿ ಸಂಸ್ಥೆಗಳ ಆಯ್ಕೆಗೆ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ. **<u>ಮಾನದಂಡಗಳು :-</u>** 1. ತರಬೇತಿ ಸಂಸ್ಥೆಯು ಕಂಪನಿ ಅಧಿನಿಯಮ/ಟ್ರಸ್ಟ್ ಅಧಿನಿಯಮ/ಸೊಸೈಟೀಸ್ ನೋಂದಣಿ ಅಧಿನಿಯಮ /ಪಾಲುದಾರಿಗೆ ಅಧಿನಿಯಮ/ಮಾಲೀಕತ್ವ ಅಧಿನಿಯಮದಡಿ ಕಡ್ಡಾಯವಾಗಿ ನೋಂದಣಿಯಾಗಿರತಕ್ಕದ್ದು. (ಕಡ್ಡಾಯ ಮಾನದಂಡ). 2. ತರಬೇತಿ ಸಂಸ್ಥೆಯು ಯು.ಪಿ.ಎಸ್.ಸಿ/ಕೆ.ಎ.ಎಸ್/ ಬ್ಯಾಂಕಿಂಗ್ / ಆರ್.ಆರ್.ಬಿ / ಎಸ್.ಎಸ್.ಸಿ / ಗ್ರೂಪ್-ಸಿ ತರಬೇತಿ ನೀಡುವ ಸಂಬಂಧ ಕನಿಷ್ಠ 3 ವರ್ಷಗಳ ಅವಧಿಯ ಅನುಭವವನ್ನು ಹೊಂದಿರತಕ್ಕದ್ದು. (ಕಡ್ಡಾಯ ಮಾನದಂಡ) 3. ಜಿ.ಎಸ್.ಟಿ ನೋಂದಣಿಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. (ಕಡ್ಡಾಯ ಮಾನದಂಡ) 4. ತರಬೇತಿ ಸಂಸ್ಥೆಯು ಹಿಂದಿನ ಮೂರು ವರ್ಷಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ರಿಟರ್ನ್ ಪ್ರತಿಗಳನ್ನು ಹೊಂದಿರತಕ್ಕದ್ದು. (ಕಡ್ಡಾಯ ಮಾನದಂಡ) 5. ಪ್ರತಿ ತರಬೇತಿಗೆ ಅನುಷ್ಠಾನ ಸಮಿತಿ ನಿರ್ಧರಿಸುವ ವಾರ್ಷಿಕ ವ್ಯವಹಾರ (Annual Turnover)ವನ್ನು ಹೊಂದಿರಬೇಕು. (ಕಡ್ಡಾಯ ಮಾನದಂಡ) 6. ತರಬೇತಿ ಸಂಸ್ಥೆಗಳು ಆನ್-ಲೈನ್ ಇ-ಮೆಟೀರಿಯಲ್ (ಸ್ಟಡಿ ಮೆಟೀರಿಯಲ್ ಪ್ರಾಕ್ಟಿಸ್ ಟೆಸ್ಟ್ ಸೀರಿಸ್, ಕೋಚಿಂಗ್ ಮೆಥಡ್) ಹೊಂದಿರಬೇಕು. ಈ ಕೆಳಕಂಡ ಅಂಕವನ್ನು ಪಡೆಯಲು ಅರ್ಹವಾಗಿರುತ್ತವೆ.

ಕ್ರ. ಸಂ.	ವಿಷಯ	ಅಂಕ
01	ಸಂಸ್ಥೆ ತನ್ನದೇ ಮೆಟೀರಿಯಲ್ ಹೊಂದಿದ್ದರೆ	05
02	ಬೇರೆ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಬಳಕೆ ಮಾಡುತ್ತಿದ್ದರೆ (ಈ ಬಗ್ಗೆ ಉಭಯ ಸಂಸ್ಥೆಗಳ ನಡುವಿನ ಒಡಂಬಂಡಿಕೆ ಪತ್ರವನ್ನು ಹಾಕಬೇಕು).	03
03	ಯಾವುದೇ ಇ-ಲರ್ನಿಂಗ್ ಮೆಟೀರಿಯಲ್ ಹೊಂದಿರದಿದ್ದರೆ ಶೂನ್ಯ ಅಂಕ	00

7. ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆ ಕಳೆದ 03 ವರ್ಷದಲ್ಲಿ ಆಯಾ ತರಬೇತಿ ನೀಡುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನಿಷ್ಠ 300 ಅಭ್ಯರ್ಥಿಗಳಿಗೆ ತರಬೇತಿ ನೀಡಿರಬೇಕು. ಈ ಕೆಳಕಂಡ ಅಂಕವನ್ನು ಪಡೆಯಲು ಅರ್ಹವಾಗಿರುತ್ತವೆ.

ಕ್ರ. ಸಂ.	ಗುರಿ	ಅಂಕ
01	300 ಕ್ಕಿಂತ ಹೆಚ್ಚು	10
02	250 ಕ್ಕಿಂತ ಹೆಚ್ಚು	08
03	200 ಕ್ಕಿಂತ ಹೆಚ್ಚು	06
04	150 ಕ್ಕಿಂತ ಹೆಚ್ಚು	04
05	100 ಕ್ಕಿಂತ ಹೆಚ್ಚು	02

8. ತರಬೇತಿ ಸಂಸ್ಥೆ ಕನಿಷ್ಠ 2000 ಚ.ಅಡಿ ವಿಸ್ತೀರ್ಣವಿರುವ, ತರಬೇತಿಗೆ ಯೋಗ್ಯವಾದ ಕಟ್ಟಡವನ್ನು ಹೊಂದಿರಬೇಕು. ಅದರಂತೆ ಈ ಕೆಳಕಂಡ ಮಾದರಿಯಲ್ಲಿ ತರಬೇತಿ ಸಂಸ್ಥೆಯು ಅಂಕವನ್ನು ಪಡೆಯುತ್ತದೆ.

ವಿಷಯ	ಅಂಕ
ತರಬೇತಿ ಸಂಸ್ಥೆಯು 2000 ಚ.ಅಡಿಯ ಸ್ವಂತ ಕಟ್ಟಡ ಹೊಂದಿದ್ದರೆ,	05
ಕನಿಷ್ಠ 03 ವರ್ಷ ಲೀಸ್ ಆಧಾರಿತ ಕಟ್ಟಡ ಹೊಂದಿದ್ದರೆ,	03
ಕನಿಷ್ಠ 03 ವರ್ಷ ಬಾಡಿಗೆ ಆಧಾರಿತ ಕಟ್ಟಡ ಹೊಂದಿದ್ದರೆ,	02
ಕನಿಷ್ಠ 2000ಕ್ಕಿಂತ ಕಡಿಮೆ 1500 ಚ.ಅಡಿ ವಿಸ್ತೀರ್ಣವಿರುವ ಸ್ವಂತ ಕಟ್ಟಡ ಹೊಂದಿದ್ದರೆ,	04
03 ವರ್ಷ ಲೀಸ್ ಆಧಾರಿತ ಕಟ್ಟಡ ಹೊಂದಿದ್ದರೆ,	03
03 ವರ್ಷ ಬಾಡಿಗೆ ಆಧಾರಿತ ಕಟ್ಟಡ ಹೊಂದಿದ್ದರೆ,	02
ಕನಿಷ್ಠ 1500 ಕ್ಕಿಂತ ಕಡಿಮೆ 1000 ಚ.ಅಡಿ ವಿಸ್ತೀರ್ಣ ಸ್ವಂತ ಕಟ್ಟಡ,	03

ಕನಿಷ್ಠ 03 ವರ್ಷ ಲೀಸ್ ಆಧಾರಿತ ಕಟ್ಟಡ ಹೊಂದಿದ್ದರೆ	02
03 ವರ್ಷ ಬಾಡಿಗೆ ಆಧಾರಿತ ಕಟ್ಟಡ ಹೊಂದಿದ್ದರೆ.	01

ಈ ಸಂಬಂಧ ಸಂಸ್ಥೆ ನೋಟರಿ ದೃಢೀಕರಣ ಕಟ್ಟಡದ ದಾಖಲೆ, ಲೀಸ್ ಅಥವಾ ಬಾಡಿಗೆ ಕರಾರು ಪತ್ರವನ್ನು ಟೆಂಡರ್ ದಾಖಲೆಯೊಂದಿಗೆ ಸಲ್ಲಿಸಬೇಕು. ಕಟ್ಟಡದ ಛಾಯಾ ಚಿತ್ರವನ್ನು ಅಪ್‌ಲೋಡ್ ಮಾಡಬೇಕು.

9. ಫಲಿತಾಂಶ

ಕ್ರ. ಸಂ.	ವಿಷಯ	ಅಂಕ
01	ತರಬೇತಿ ಸಂಸ್ಥೆಯು ಕಳೆದ ಮೂರು ವರ್ಷದಲ್ಲಿ ಐ.ಎ.ಎಸ್-10 ಅಭ್ಯರ್ಥಿಗಳು, ಕೆ.ಎ.ಎಸ್, ಬ್ಯಾಂಕಿಂಗ್, ಆರ್.ಆರ್.ಬಿ, ಎಸ್.ಎಸ್.ಸಿ, ಗ್ರೂಪ್-ಎ.ಬಿ.ಸಿ ಅರ್ಹತಾ ಪರೀಕ್ಷೆಯಲ್ಲಿ 20 ಅಭ್ಯರ್ಥಿಗಳು ಯಶಸ್ವಿ ಫಲಿತಾಂಶ ದಾಖಲಿಸಿದ್ದರೆ,	10
02	ಐ.ಎ.ಎಸ್ 8 ಕ್ಕಿಂತ ಹೆಚ್ಚು ಕೆ.ಎ.ಎಸ್/ಇತರೆ 16	06
03	ಐ.ಎ.ಎಸ್ 6 ಕ್ಕಿಂತ ಹೆಚ್ಚು ಕೆ.ಎ.ಎಸ್/ಇತರೆ 12	04
04	ಐ.ಎ.ಎಸ್ 4 ಕ್ಕಿಂತ ಹೆಚ್ಚು ಕೆ.ಎ.ಎಸ್/ಇತರೆ 08	02

ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಸೇರಿ

10. ತರಬೇತಿ ಸಂಸ್ಥೆ ಕನಿಷ್ಠ ಒಂದು ವರ್ಷದ ಅವಧಿಗೆ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ಹೊಂದಿರಬೇಕು. ಈ ಕೆಳಕಂಡ ಅಂಕ ಪಡೆಯತಕ್ಕದ್ದು.

ವಿಷಯ	ಅಂಕ
ಕನಿಷ್ಠ 05 ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿ	05
ಕನಿಷ್ಠ 04 ಸಿಬ್ಬಂದಿ	04
ಕನಿಷ್ಠ 03 ಸಿಬ್ಬಂದಿ	03
ಕನಿಷ್ಠ 02 ಸಿಬ್ಬಂದಿ	02
ಕನಿಷ್ಠ 01 ಸಿಬ್ಬಂದಿ	01

ಖಾಯಂ ಸಿಬ್ಬಂದಿ ಎಂಬುದನ್ನು ದೃಢೀಕರಿಸಿ ಸಿಬ್ಬಂದಿ ವಿವರವನ್ನು ಮಾಹೆವಾರು ಸಂಸ್ಥೆಯಿಂದ ನೀಡಲಾದ ಆನ್-ಲೈನ್ ಪೇಮೆಂಟ್ EPF/ESI/TDS ಮೊದಲಾದ ನೋಟರಿಗಳನ್ನು ದೃಢೀಕರಿಸಿ ದಾಖಲೆಯನ್ನು ಒದಗಿಸಬೇಕು.

		11. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸಂಸ್ಥೆ ಕನಿಷ್ಠ 10 ಪುರುಷ-ಮಹಿಳಾ ಶೌಚಾಲಯ ಹೊಂದಿರಬೇಕು. (ನೋಟರಿ ದೃಢೀಕರಣದೊಂದಿಗೆ ಭಾವಚಿತ್ರ ಸಲ್ಲಿಸಬೇಕು) 12. ತರಬೇತಿ ಸಂಸ್ಥೆಯು ತಮ್ಮದೇ ಅಧ್ಯಯನ ಸಾಮಾಗ್ರಿಗಳನ್ನು ಹೊಂದಿರಬೇಕು/ ಬೇರೆ ಪ್ರಕಾಶನ ಸಹಭಾಗಿತ್ವದ ಅಧ್ಯಯನ ಸಾಮಾಗ್ರಿ ಹೊಂದಿರಬೇಕು. (ಅಧ್ಯಯನ ಸಾಮಾಗ್ರಿ ವಿವರವನ್ನು ದಾಖಲಿಸಬೇಕು. ತಾಂತ್ರಿಕ ಬಿಡ್ ತೆರೆಯುವ ವೇಳೆ ಹಾಜರುಪಡಿಸಬೇಕು). **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಸಂಸ್ಥೆಗಳ ಆಯ್ಕೆಗೆ ನಿಗದಿಪಡಿಸಿರುವ ಮಾನದಂಡಗಳು ಈ ಕೆಳಕಂಡಂತಿವೆ.** 1. ಪರೀಕ್ಷಾ ಪೂರ್ವ ತರಬೇತಿ ನೀಡುವ ಸಂಸ್ಥೆಯು ಅಂಗೀಕೃತ ಸಂಸ್ಥೆ/ಇಲಾಖೆಯಿಂದ ನೊಂದಾಣಿ ಮಾಡಿಸಿಕೊಂಡಿರಬೇಕು. 2. ಟೆಂಡರ್ ಸಲ್ಲಿಸುವ ಸಂಸ್ಥೆಯು ಹಿಂದಿನ ಸಾಲುಗಳಲ್ಲಿ ತರಬೇತಿ ನೀಡುವಲ್ಲಿ ಇಲಾಖೆ ನಿಗದಿಪಡಿಸುವಷ್ಟು ವರ್ಷಗಳ ಅನುಭವವನ್ನು ಹೊಂದಿರಬೇಕು. 3. ಸಂಸ್ಥೆಯು ಇಲಾಖೆ ಕೋರುವಂತೆ ಕಳೆದ ಸಾಲುಗಳಲ್ಲಿ ಯಶಸ್ವಿ ಅಭ್ಯರ್ಥಿಗಳನ್ನು ಹೊಂದಿರಬೇಕು. 4. ಸಂಸ್ಥೆಯು ಆದಾಯ ಮತ್ತು ಸೇವಾ ತೆರಿಗೆಯನ್ನು ಪಾವತಿಸುತ್ತಿರಬೇಕು. 5. ಸಂಸ್ಥೆಯು ಇಲಾಖೆ ಕೋರುವಂತೆ ಕಳೆದ ಸಾಲುಗಳಲ್ಲಿ ನಿಗದಿತ ವಾರ್ಷಿಕ ವಹಿವಾಟನ್ನು ಹೊಂದಿರಬೇಕು. 6. ಸಂಸ್ಥೆಯು ಸುವ್ಯವಸ್ಥಿತವಾದ ತರಗತಿ ಕೊಠಡಿ, ಗ್ರಂಥಾಲಯ, ಆಡಿಯೋ-ವಿಷ್ಯುಯಲ್ ಕೊಠಡಿಗಳಂತಹ ಮೂಲಭೂತ ಸೌಲಭ್ಯ ಹೊಂದಿರಬೇಕು. 7. ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕವೇ ಇ-ಟೆಂಡರ್ ಸಲ್ಲಿಸಬೇಕು.
ಆ)	ಕಾಲಕಾಲಕ್ಕೆ ಸೇರ್ಪಡೆಗೊಂಡ ಸಂಸ್ಥೆಗಳಿಂದ ಗುಣಮಟ್ಟದ ತರಬೇತಿಯನ್ನು ನೀಡುವ ವ್ಯವಸ್ಥೆಗಳ ಪರಿಶೀಲನೆಗಾಗಿ ಸ್ಥಾಪಿಸಲಾದ ಮೇಲ್ವಿಚಾರಣಾ ಕಾರ್ಯವಿಧಾನಗಳಾವುವು :	1. ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನೀಡಲಾಗುತ್ತಿರುವ ತರಬೇತಿಯ ಗುಣಮಟ್ಟವನ್ನು ಮೂರನೇ ವ್ಯಕ್ತಿ/ ಸಂಸ್ಥೆಯಿಂದ ಅಂದರೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಅಥವಾ ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿ/ಐಐಎಂಬಿ/ಮೊದಲಾದ ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು/ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳು/ಕೆ.ಇ.ಎ ಮೂಲಕ ಮೌಲ್ಯಮಾಪನ ಮಾಡಿಸಲಾಗುವುದು. 2. ಗುಣಮಟ್ಟದ ತರಬೇತಿ ಸಂಸ್ಥೆಯನ್ನು ಗುರುತಿಸುವ ಸಂಬಂಧ ವಿದ್ಯಾರ್ಥಿಗಳಿಂದ ತರಬೇತಿ ಸಂಸ್ಥೆಗಳ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರ ಪಡೆಯಲಾಗುವುದು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ತರಬೇತಿ ನೀಡುವ ಸಂಸ್ಥೆಯಿಂದ ಅಭ್ಯರ್ಥಿಗಳ ಮಾಸಿಕ ಹಾಜರಾತಿ, ಅಭ್ಯರ್ಥಿಗಳಿಗೆ ನಡೆಸುವ ಪರೀಕ್ಷಾ ಮಾಹಿತಿ,

		ತರಬೇತಿ ನೀಡಿದ ಬಗ್ಗೆ ವರದಿಯನ್ನು ಪಡೆಯಲಾಗುತ್ತದೆ. ಜೊತೆಗೆ ಸಂಸ್ಥೆಗಳು ಅಭ್ಯರ್ಥಿಗಳಿಗೆ ಗುಣಮಟ್ಟದ ತರಬೇತಿ ನೀಡುವ ಬಗ್ಗೆ ರಾಜ್ಯ ಮಟ್ಟದ / ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಕಾಲ ಕಾಲಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುವುದು.
ಇ)	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಶಸ್ವಿ ಅಭ್ಯರ್ಥಿಗಳ ಸಂಖ್ಯೆ ಎಷ್ಟು?	ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಯು.ಪಿ.ಎಸ್.ಸಿ/ಕೆ.ಎ.ಎಸ್/ಬ್ಯಾಂಕಿಂಗ್/ಗ್ರೂಪ್-ಸಿ/ಎಸ್.ಎಸ್.ಸಿ ಮತ್ತು ಆರ್.ಆರ್.ಬಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿಯನ್ನು ನೀಡಲಾಗುತ್ತಿದ್ದು. ಕಳೆದ ಮೂರು ವರ್ಷಗಳಲ್ಲಿ ತರಬೇತಿ ಪಡೆದು ಯಶಸ್ವಿಯಾದ/ ವಿವಿಧ ಹುದ್ದೆಗಳನ್ನು ಪಡೆದ ಅಭ್ಯರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ. ಸಂ.	ಸೇವೆಗಳು	ಸಮಾಜ ಕಲ್ಯಾಣ ಇಲಾಖೆ	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
1	ಯು.ಪಿ.ಎಸ್.ಸಿ./ ನಾಗರೀಕ ಸೇವೆಗಳು	05 ಅಭ್ಯರ್ಥಿಗಳು	07 ಅಭ್ಯರ್ಥಿಗಳು
2	ಕೆ.ಎ.ಎಸ್./ ನಾಗರೀಕ ಸೇವೆಗಳು	09 ಅಭ್ಯರ್ಥಿಗಳು	55 ಅಭ್ಯರ್ಥಿಗಳು
3	ಬ್ಯಾಂಕಿಂಗ್/ಗ್ರೂಪ್ -ಸಿ/ಎಸ್.ಎಸ್.ಸಿ/ ಆರ್.ಆರ್.ಬಿ.	410 ಅಭ್ಯರ್ಥಿಗಳು	38 ಅಭ್ಯರ್ಥಿಗಳು

ಸಕಇ 118 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.